# ಪರಿವರ್ತನೆಯ ಆ ಕ್ಷಣ!





**ಸ್ವಾತಂತ್ರ್ಯದಾಶೆಯ ತೀವ್ರ ಖುಷಿಯಿಂದ ಗೂಡಿನ ಆ ಜಾಗಕ್ಕೆ ಮುತ್ತಿಡುತ್ತಲೇ ತಲೆಯನ್ನು ಸ್ವಲ್ಪ ಸ್ವಲ್ಪವಾಗಿ ಆ ಕಡೆ ಈ ಕಡೆ ತೂರಿಸುತ್ತಾ ಆ ಬಂಧೀಖಾನೆಯಿಂದ ಹೊರಗೆ ಹಣಿಕಿಕ್ಕಿದರೆ, ಒಮ್ಮೆಲೆ ರಾಚಿತು ಪ್ರಖರ ಬೆಳಕು!**

■ ಮುಕುಂದ್ ವಿ. ಕಿರಸೂರ್/ರಾಧಾಲಕ್ಷ್ಮಿ ವೈ.ಸಿ.
ಫೋಟೋ: ಎ.ಎಂ. ಬಾಬು

ಹೆಚ್ಚು ಕಡಿಮೆ ಕಳೆದೊಂದು ವಾರದಿಂದ ಬಾಹ್ಯ ಪ್ರಪಂಚದ ಅರಿವೇ ಇಲ್ಲದಂತೆ ಗಾಢ ನಿದ್ರೆ ಮಾಡಿ ಮೈಮುರಿದೆದ್ದವನಿಗೆ ಒಮ್ಮೆಲೇ ಮೈಯಲ್ಲಿ ಹೊಸ ಶಕ್ತಿ ಸಂಚಾರವಾದ ಅನುಭವ! ಅದಮ್ಯ ಚೈತನ್ಯ, ಹೊಸ ಉತ್ಸಾಹ, ಪ್ರಣಯ ಕುತೂಹಲ, ಕಾಣದ ಪ್ರೇಯಸಿಯ ಸೇರುವ ತವಕ! ತನ್ನ ಬಲಿಷ್ಠ ಹೊಸ ಕಾಯವನ್ನು ಹೆಮ್ಮೆಯಿಂದ ನೋಡಿಕೊಂಡವನಿಗೆ ಮಸುಕು ಮಸುಕಾಗಿ ಕಂಡದ್ದು ತನ್ನ ಹೊಸ ಮೀಸೆ! ಎಷ್ಟು ದೊಡ್ಡ ಪೊತ್ತೇ ಮೀಸೆ! ಮೀಸೆ ಬಂದವನಿಗೆ ದೇಶ ಕಾಣುವುದಿಲ್ಲವಂತೆ! ಬಹುಶಃ ಅದಕ್ಕೇ ಏನೋ ನನಗೆ ಯಾವುದೂ ಸರಿಯಾಗಿ ಕಾಣುತ್ತಿಲ್ಲ. ಸುತ್ತಲೂ ಕತ್ತಲೆ! ಎಂದುಕೊಂಡ.

ತಾನು ಕುಳಿತಲ್ಲೇ ತಿಂದು ತಿಂದು ದುಂಡಗಾಗಿ, ತನ್ನ ಸುತ್ತಲೂ ತಾನೇ ಕಟ್ಟಿಕೊಂಡ ಬಂಧೀಖಾನೆಯಲ್ಲಿ ತೀವ್ರ ಆಯಾಸದಿಂದ ನಿದ್ರೆ ಹೋದದ್ದು ಮಾತ್ರ ಮಸುಕು ಮಸುಕಾಗಿ ನೆನಪಿದೆ. ಎಚ್ಚರವಾದಾಗ ಎಂಥ ವಿಚಿತ್ರ ಬದಲಾವಣೆ! ತನ್ನ ಸುತ್ತಲೂ ಕಟ್ಟಿಕೊಂಡ ಅಭೇದ್ಯ ಕೋಟೆಯನ್ನು ತಾನೇ ಕುಟ್ಟಿ ಪುಡಿಮಾಡುವ ಹುಮ್ಮಸ್ಸು! ಸ್ವಾತಂತ್ರ್ಯದೆಡೆಗೆ ನೆಗೆದು ಫಡ ಫಡನೆ ರೆಕ್ಕೆ ಬಡಿಯುವ ಉತ್ಸಾಹ!

(36ನೇ ಪುಟ ನೋಡಿ)